## ೨

# ಸಭೆಯ ಸಂಘಟನೆಯ ಪರಿಶುದ್ಧ ಬರಹದ ದೃಷ್ಟಿಕೋನ

ಸಭೆಯ ನಾಯಕತ್ವದ ಅಧ್ಯಯನವು ಸಭೆಯ ಸಂಘಟನೆಯ ತಿಳುವಳಿಕೆಯ ಅವಶ್ಯಕತೆಯನ್ನುಂಟು ಮಾಡುತ್ತದೆ. ಕರ್ತನ ಸಭೆಯು ಹೊಸ ಒಡಂಬಡಿಕೆಯ ಪ್ರಕಾರ ಹೇಗೆ ಸಂಘಟಿಸಲ್ಪಡಬೇಕು? ವಿಶ್ವದ ಬಿಷಪ್‌ನಲ್ಲಿ ಉನ್ನತಗೊಳ್ಳುವ ಪುರೋಹಿತ ವೃದ್ಧಿ ಪದ್ಧತಿ ಅದಕ್ಕಿರಬೇಕೋ? ಸಭಾ ಪ್ರಾಂತ್ಯಗಳನ್ನು ನಿಯಂತ್ರಿಸುವ ಬಿಷಪರುಗಳಿರಬೇಕೋ? ಸಿನೋಡು ಗಳಲ್ಲಿ ಇಲ್ಲವೇ ಕನ್ವೆನ್ಶನ್‌ಗಳಲ್ಲಿ ಅಧಿಕಾರವು ಕೇಂದ್ರೀಕೃತವಾಗಿರಬೇಕೋ? ಸ್ಥಳಿಕ ಸಭೆಗಳು ರಾಷ್ಟ್ರೀಯ ಇಲ್ಲವೇ ಅಂತರ್ ರಾಷ್ಟ್ರೀಯ ಸಂಘಟನೆಗಳೊಂದಿಗೆ ಸಂಬಂಧಿಸಿರಬೇಕೋ ಇಲ್ಲವೇ ಸ್ವತಂತ್ರ ಆಡಳಿತೆಯನ್ನೊಳಗೊಂಡಿರಬೇಕೋ? ಒಬ್ಬ ಪ್ರಸಂಗಿಯು ಪ್ರತಿಯೊಂದು ಸ್ಥಳಿಕ ಸಭೆಯ ಮೇಲ್ವಿಚಾರಕನಾಗಿರಬೇಕೋ? ಕ್ರಿಸ್ತನನ್ನು ಹಿಂಬಾಲಿಸುವೆವೆಂದು ಹೇಳುವ ಭಿನ್ನವಾದ ಧಾರ್ಮಿಕ ಗುಂಪುಗಳಷ್ಟು, ಅನೇಕ ಸಭಾ ಸಂಘಟನೆಯ ಅಭಿಪ್ರಾಯಗಳು ಅಸ್ತಿತ್ವದಲ್ಲಿರುತ್ತವೆ.

ನಾವು ಹೊಸ ಒಡಂಬಡಿಕೆಯ ಸಭೆಯಾಗಿರಲು ಸಮರ್ಪಿಸಿ ಕೊಳ್ಳಲ್ಪಟ್ಟದ್ದರಿಂದ, ಹೊಸ ಒಡಂಬಡಿಕೆಯ ಸಭೆಯು ಹೇಗೆ ಸಂಘಟಿಸಲ್ಪಟ್ಟಿತ್ತು, ಅದರ ನಾಯಕರುಗಳು ಯಾರಿದ್ದರು ಮತ್ತು ಅವರು ಏನು ಮಾಡಿದರು ಎಂಬುದನ್ನು ಅರ್ಥಮಾಡಿಕೊಳ್ಳುವ ಅಗತ್ಯತೆಯಿದೆ.

### ಪ್ರಾಥಮಿಕ ಸಂಘಟನೆ

ಪ್ರಾರಂಭಿಸುವಂತೆ, ಸಭೆಯ ಪ್ರಾಥಮಿಕ ಸಂಘಟನೆಯನ್ನು ಯೋಚಿಸುವ ಅಗತ್ಯತೆ ನಮಗಿದೆ. "ಪ್ರಾಥಮಿಕ" ಎಂಬುದರಿಂದ "ಮೂಲ" ಇಲ್ಲವೇ "ಮೂಲಭೂತವಾದ" ಎಂದರ್ಥವಾಗುತ್ತದೆ - ಕರ್ತನ ಜನಾಂಗಕ್ಕೆ ಅನ್ವಯಿಸುವಾಗ "ಸಭೆ" ಎಂಬ ಪದದ ಉಪಯೋಗವು ವಿಶ್ವವ್ಯಾಪಕವಾಗಿ ಮತ್ತು ಸ್ಥಳಿಕವಾಗಿ ಸಂಬಂಧಿಸಿರುತ್ತದೆ.

#### "ಸಭೆ" ಎಂಬ ಪದದ ಅರ್ಥವೇನು?

"ಸಭೆ" ಎಂಬುದಕ್ಕೆ ಗ್ರೀಕ್ ಪದವು *ekklesia* ಎಂದಿರುತ್ತದೆ. ಇದು ಎರಡು ಪದಗಳಿಂದ ಬರುತ್ತದೆ - *ek,* ಅಂದರೆ "ಹೊರಗೆ" ಮತ್ತು *kaleo,* ಅಂದರೆ "ಕರೆಯುವುದು" ಎಂದರ್ಥ ವಾಗುತ್ತದೆ. ಹೀಗೆ ಸಭೆಯು "ಹೊರಗೆ ಕರೆಯಲ್ಪಟ್ಟವರು" ಎಂಬರ್ಥದಿಂದ ಹೇಳಲ್ಪಟ್ಟಿದೆ. ಹೀಗಿದ್ದರೂ, "ಹೊರಗೆ ಕರೆಯಲ್ಪಟ್ಟವರು" ಎಂಬುದು ಬಹುಶಃ ಪದದ ಅತ್ಯುತ್ತಮವಾದ ನಿರೂಪಣೆಯಾಗಿರುವದಿಲ್ಲ; ಅದನ್ನು "ಸಭಾಕೂಟ" ಇಲ್ಲವೇ "ಸಭೆ" ಎಂದು ನಿರೂಪಣೆ ಮಾಡಬಹುದು.

"ಸಭೆ" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ನಾಲ್ಕು ಭಿನ್ನವಾದ ವಿಧಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಅಪೊಸ್ತಲರ ಕೃತ್ಯ 19:32, 39, 41ರಲ್ಲಿ ಅದು ನಾಗರಿಕರ ಕೂಟಕ್ಕೆ - ಹೆಚ್ಚಾಗಿ ಗುಂಪುಗೂಡಿದ್ದಕ್ಕೆ ಉಪಯೋಗಿಸಲ್ಪಟ್ಟಿದೆ. ದೇವರ ಜನಾಂಗಕ್ಕೆ ಅನ್ವಯಿಸಲ್ಪಡು ವಾಗ, ಅದು ಮೂರು ವಿಧಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಅದು *ಸಾರ್ವತ್ರಿಕ ಸಭೆಗಾಗಿ*

ಉಪಯೋಗಿಸಲ್ಪಟ್ಟಿದೆ - ಕ್ರಿಸ್ತನಿಂದ ರಕ್ಷಿಸಲ್ಪಟ್ಟ ದೇವರ ಎಲ್ಲಾ ಜನರಿಗಾಗಿ ಉಪಯೋಗಿ ಸಲ್ಪಟ್ಟಿದೆ:

> “ಮತ್ತು ನಾನೂ ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನಂದರೆ - ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು” (ಮತ್ತಾಯ 16:18).
>
> ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; ಆತನು ಆದಿ ಸಂಭೂತನು. ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ (ಕೊಲೊಸ್ಸೆ 1:18).

*ಅದು ಸ್ಥಳಿಕ ಸಭೆಗಾಗಿ* - ನಿರ್ದಿಷ್ಟವಾದ ಸ್ಥಳದಲ್ಲಿ ನಿರ್ದಿಷ್ಟವಾದ ಸಭೆಯ ಸದಸ್ಯರಾಗಿರುವ ದೇವರ ಜನರಿಗಾಗಿ ಉಪಯೋಗಿಸಲ್ಪಟ್ಟಿದೆ. “ಪರಿಶುದ್ಧವಾದ ಮುದ್ದಿಟ್ಟು ಒಬ್ಬರನ್ನೊಬ್ಬರು ವಂದಿಸಿರಿ. ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ” ಎಂದು ರೋಮಾಪುರ 16:16 ಹೇಳುತ್ತದೆ (ನೋಡಿರಿ ಗಲಾತ್ಯ 1:2; ಪ್ರಕಟಣೆ 1:20; 2:1; ಇತ್ಯಾದಿ). ಅದು *ಸ್ಥಳಿಕ ಸಭೆಯ ಸಭಾ ಕೂಟಕ್ಕಾಗಿ* - ಸಭೆಯು ಒಂದಾಗಿ ಕೂಡಿ ಬರುವಾಗಿನ ಸಭಾಕೂಟಕ್ಕಾಗಿಯೂ ಉಪಯೋಗಿಸಲ್ಪಟ್ಟಿದೆ (1 ಕೊರಿಂಥ 14:19, 23, 26, 28, 35).

**“ಪ್ರಾಥಮಿಕ ಸಂಘಟನೆಯು” ಏನಾಗಿರುತ್ತದೆ?**

ಹಾಗಾದರೆ ಸಭೆಯ “ಪ್ರಾಥಮಿಕ ಸಂಘಟನೆಯು” ಏನಾಗಿರುತ್ತದೆ? *ಅದು* ಕ್ರಿಸ್ತನೊಂದಿಗೆ ವೈಯಕ್ತಿಕವಾಗಿ ಕ್ರೈಸ್ತರ *ಸಂಬಂಧವಾಗಿದೆ* - ಸಾರ್ವತ್ರಿಕ ಸಭೆಯ ಸಂಬಂಧದ ಗುಣಲಕ್ಷಣ ವಾಗಿದೆ, ಆದರೆ ಸ್ಥಳಿಕ ಸಭೆಯ ಸಂಘಟನೆಗಾಗಿ ಆಧಾರದ ಸಂಬಂಧವೂ ಆಗಿದೆ.

ಆ ಸಂಬಂಧವು ಏನಾಗಿರುತ್ತದೆ? (1) ಕ್ರಿಸ್ತನು ದ್ರಾಕ್ಷೇ ಬಳ್ಳಿ; ಪ್ರತಿಯೊಬ್ಬ ಕ್ರೈಸ್ತನು ಒಂದು ಕೊಂಬೆ (ಯೋಹಾನ 15:1-11). (2) ಕ್ರಿಸ್ತನು ದೇಹದ ಶಿರಸ್ಸಾಗಿದ್ದಾನೆ; ಕ್ರೈಸ್ತರು ದೇಹದ ಅಂಗಗಳಾಗಿದ್ದಾರೆ (1 ಕೊರಿಂಥ 12:12; ಎಫೆಸ 1:22, 23; ಕೊಲೊಸ್ಸೆ 1:18). (3) ಕ್ರೈಸ್ತರು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿದ್ದಾರೆ, ಆತನ ಮರಣದಲ್ಲಿ ಬಾಪ್ತಿಸ್ಮ ಹೊಂದಿದ್ದಾರೆ, ಮತ್ತು ಬಾಪ್ತಿಸ್ಮದಲ್ಲಿ ಕ್ರಿಸ್ತನನ್ನು ಧರಿಸಿಕೊಂಡಿದ್ದಾರೆ (ರೋಮಾಪುರ 6:3; ಗಲಾತ್ಯ 3:27). ಕ್ರಿಸ್ತನು ಕ್ರೈಸ್ತರಲ್ಲಿ ವಾಸಿಸುತ್ತಾನೆ (ಕೊಲೊಸ್ಸೆ 1:27). ಆದುದರಿಂದ ಕ್ರೈಸ್ತರು ಕ್ರಿಸ್ತನಲ್ಲಿ ದ್ದಾರೆ (ಎಫೆಸ 1:13). (4) ಕ್ರೈಸ್ತರು ಶಿಷ್ಯರಾಗಿದ್ದಾರೆ (ಅಪೊಸ್ತಲರ ಕೃತ್ಯಗಳು 11:26). ಹೀಗೆ ಅವರು ಕಲಿಯುವವರು ಇಲ್ಲವೇ ವಿದ್ಯಾರ್ಥಿಗಳು ಆಗಿದ್ದಾರೆ; ಅದು ಕ್ರಿಸ್ತನನ್ನು ಅವರ ಬೋಧಕನನ್ನಾಗಿ ಮಾಡುತ್ತದೆ. (5) ಕ್ರಿಸ್ತನು ದೇಹವನ್ನು (ವಿವಿಧ ಅಂಗಗಳನ್ನು ಇಲ್ಲವೇ ಕ್ರೈಸ್ತರನ್ನು ಕೂಡಿಸಿದ್ದನ್ನು) ಪ್ರೀತಿಸುತ್ತಾನೆ, ದೇಹಕ್ಕಾಗಿ ಮರಣ ಹೊಂದಿದನು, ದೇಹವನ್ನು ರಕ್ಷಿಸುತ್ತಾನೆ, ದೇಹದ ಶಿರಸ್ಸಾಗಿರುತ್ತಾನೆ; ದೇಹವನ್ನು ಶುದ್ಧೀಕರಿಸುತ್ತಾನೆ, ಮತ್ತು ದೇಹ ವನ್ನು ಪೋಷಿಸುತ್ತಾನೆ. ಮತ್ತು ಬೆಳೆಸುತ್ತಾನೆ ಆದುದರಿಂದ ದೇಹವು ಕ್ರಿಸ್ತನಿಗೆ ಅಧೀನವಾ ಗಿರುತ್ತದೆ (ಎಫೆಸ 5:23-30). (6) ಕ್ರಿಸ್ತನು ಪರಲೋಕ ರಾಜ್ಯದ ಅರಸನಾಗಿದ್ದರೆ (ಯೋಹಾನ 18:36, 37), ಆಗ ಕ್ರೈಸ್ತರು ಆತನ ಪ್ರಜೆಗಳಾಗಿರುವರು, ಆತನ ರಾಜ್ಯದ ನಾಗರಿಕರಾಗಿರುವರು. (7) ಕ್ರಿಸ್ತನು ಒಳ್ಳೆಯ ಕುರುಬನಾಗಿದ್ದಾನೆ; ನಾವು ಆತನ ಕುರಿಗಳು (ಯೋಹಾನ 10:1-18). (8) ಕ್ರೈಸ್ತರು ಇನ್ನು ಜೀವಿಸುವವರು ತಾವಲ್ಲ, ಆದರೆ ತಮ್ಮಲ್ಲಿ ಕ್ರಿಸ್ತನು ಜೀವಿಸುತ್ತಾನೆ ಎಂದು ಹೇಳಬಹುದು (ಗಲಾತ್ಯ 2:20), ಮತ್ತು ಅವರಿಗೆ “ಜೀವಿಸುವುದು ಕ್ರಿಸ್ತನು” ಆಗಿರುತ್ತಾನೆ (ಫಿಲಿಪ್ಪಿ 1:21).

**ನಾಯಕತ್ವಕ್ಕಾಗಿ ಅನ್ವಯಗಳು ಯಾವವು?**

ಸ್ಥಳಿಕ ಸಭೆಯ ನಾಯಕತ್ವದ ಮೇಲೆ ಪ್ರಭಾವ ಬೀರುವ ಈ ಪ್ರಾಥಮಿಕ ಸಂಘಟನೆಯ ಅನ್ವಯಗಳು ಯಾವವು? ಮೊದಲನೆಯದು, *ಎಲ್ಲಾ* ಕ್ರೈಸ್ತರಿಗೆ ಕ್ರಿಸ್ತನೊಂದಿಗೆ ಸಂಬಂಧವಿದೆ; ನಾಯಕರು (ಉದಾಹರಣೆ, ಹಿರಿಯರು, ಡೀಕನರು, ಪ್ರಸಂಗಿಗಳು) ಇತರರಿಗೆ ಲಭ್ಯವಿರದ ಕ್ರಿಸ್ತನೊಂದಿಗಿನ ನಿಕಟವಾದ ಇಲ್ಲವೇ ತಮಗಾಗಿ ಮಾತ್ರವೇ ಸಂಬಂಧವಿರುವದಿಲ್ಲ. ಇದನ್ನು ತಿಳಿದಿರುವುದು ಸಭಾನಾಯಕರು ದೀನರಾಗಿ ಇರುವದಕ್ಕೆ ಸಹಾಯ ಮಾಡಬೇಕು. ಎರಡನೆಯದು, ಕ್ರಿಸ್ತನೊಂದಿಗಿನ ಕ್ರೈಸ್ತರ ಸಂಬಂಧವು ಸಂಪೂರ್ಣವಾಗಿ (1) *ಸಭೆಯ ನಾಯಕರ ಮೇಲೆ* ಇಲ್ಲವೇ (2) *ಸ್ಥಳಿಕ ಸಭೆಯ* ಮೇಲೆ ಅವಲಂಬಿಸಿರುವದಿಲ್ಲ. ಕ್ರಿಸ್ತನ ಬಳಿಗೆ ಹೋಗಲು ಇಲ್ಲವೇ ಕ್ರಿಸ್ತನೊಂದಿಗೆ ಸಂಬಂಧವಿಟ್ಟು ಕೊಳ್ಳುವವರು ಯಾವುದೇ ಸಭಾ ಹಿರಿಯನ ಮೂಲಕ ಹೋಗ ಬೇಕಾಗಿರುವದಿಲ್ಲ ಎಲ್ಲಾ ಕ್ರೈಸ್ತರು ಯಾಜಕರಾಗಿದ್ದಾರೆ (1 ಪೇತ್ರ 2:5, 9); ಹೀಗೆ ಪ್ರತಿಯೊಬ್ಬ ಕ್ರೈಸ್ತನಿಗೆ, ಯಾವುದೇ ಮಾನವ ಸಭೆಯ ಅಧಿಕಾರಿಯನ್ನು ಮಧ್ಯಸ್ಥಗಾರನಂತೆ ಉಪಯೋಗಿಸದೇ ದೇವರ ಮುಂದೆ ಬರುವ ಸದಾವಕಾಶವು ಇರುತ್ತದೆ. ಕ್ರೈಸ್ತರು ಸ್ಥಳಿಕ ಸಭೆಯ ಚಟುವಟಿಕೆಯ ಭಾಗವಾಗಿರುವಾಗ, ಸ್ಥಳಿಕ ಸಭೆಯು ಅವರನ್ನು ಕ್ರಿಸ್ತನೊಂದಿಗೆ ತೃಪ್ತಿಕರವಾದ ಸಂಬಂಧವಿರುವದರಿಂದ ಅಡ್ಡಿಪಡಿಸಲಾರದು. ಒಬ್ಬ ಒಳ್ಳೆ ಕ್ರೈಸ್ತನು ಒಂದು ಕೆಟ್ಟ ಸಭೆಯಲ್ಲಿ ಕಂಡುಕೊಳ್ಳಬಹುದು. ಕೊರಿಂಥ ಸಭೆಯು ಸಮಸ್ಯೆಗಳಿಂದ, ಕೂಡಿದ್ದಾಗಿದ್ದರೂ ಅಲ್ಲಿ ನಂಬಿಗಸ್ತ ಕ್ರೈಸ್ತರಿದ್ದರು. ಸಾರ್ದಿಸ್ ಸಭೆಯು ಸತ್ತ ಸಭೆಯಾಗಿದೆ ಎಂದು ಯೇಸು ಘೋಷಿಸಿದರೂ, "ಆದರೂ ತಮ್ಮ ವಸ್ತ್ರಗಳನ್ನು ಮೈಲಿಗೆ ಮಾಡಿಕೊಳ್ಳದಿರುವ ಸ್ವಲ್ಪ ಜನರು ಸಾರ್ದಿಸಿನೊಳಗೆ ನಿನ್ನಲ್ಲಿದ್ದಾರೆ; ಅವರು ಯೋಗ್ಯರಾಗಿ ರುವದರಿಂದ ಶುಭ್ರವಸ್ತ್ರಗಳನ್ನು ಧರಿಸಿಕೊಂಡು ನನ್ನ ಜೊತೆಯಲ್ಲಿ ನಡೆಯುವರು" (ಪ್ರಕಟನೆ 3:4) ಎಂದು ಮುಂದುವರಿದು ಹೇಳಿದನು.

## ಸ್ಥಳಿಕ ಸಭೆ

ಕ್ರಿಸ್ತನಿಗೆ ವೈಯಕ್ತಿಕ ಕ್ರೈಸ್ತನ ಸಂಬಂಧವು ಪ್ರಾಥಮಿಕವಾದದ್ದು ಇಲ್ಲವೇ ಮೂಲವಾದದ್ದು ಆಗಿದ್ದರೆ, ಆಗ ದೇವರ ಯೋಜನೆಯಲ್ಲಿ ಸ್ಥಳಿಕ ಸಭೆಗೆ ಯಾವ ಸ್ಥಾನವಿರುವುದು?

**ಸ್ಥಳಿಕ ಸಭೆಯು ಯಾಕೆ ಇರಬೇಕು?**

ಕೆಲವು ಧಾರ್ಮಿಕ ಬೋಧಕರು ಸ್ಥಳಿಕ ಸಭೆಗಾಗಿ ಕಾರಣವನ್ನು ನೋಡುವದಿಲ್ಲ. ಕೆಲವು ವೈಯಕ್ತಿಕ ಕ್ರೈಸ್ತರೂ ಸಹ ಸ್ಥಳಿಕ ಸಭೆಗಾಗಿ ಅಗತ್ಯತೆಯನ್ನು ಸ್ಪಷ್ಟವಾಗಿ ನೋಡುವದಿಲ್ಲ, ಯಾಕೆಂದರೆ ಅವರು ಒಂದು ಸಭೆಯೊಂದಿಗೆ ಸದಸ್ಯವನ್ನು ಇಟ್ಟು ಕೊಳ್ಳುವದಿಲ್ಲ ಇಲ್ಲವೇ ಒಂದು ಸಭೆಯಲ್ಲಿ ಚಟುವಟಿಕೆಯಿಂದ ಭಾಗವಹಿಸುವದನ್ನು ತಿರಸ್ಕರಿಸುತ್ತಾರೆ.

ಹೀಗಿದ್ದರೂ, ಕ್ರೈಸ್ತರಂತೆ ತಾವು "ಒಬ್ಬಂಟಿಗರಾಗಿಯೇ" ಪ್ರಯತ್ನಿಸುವದಕ್ಕಿಂತ ಸ್ಥಳಿಕ ಸಭೆಯಲ್ಲಿ ಒಂದು ಗೂಡಿರುವುದು ಕ್ರೈಸ್ತರಿಗೆ ಹೆಚ್ಚು ಉತ್ತಮವಾದದ್ದಾಗಿದೆ. ಅದನ್ನು ನಾವು ಹೇಗೆ ತಿಳಿಯುವೆವು? ಯಾಕೆಂದರೆ *ಸ್ಥಳಿಕ ಸಭೆಯು ದೇವರ ಯೋಜನೆಯ ಭಾಗವಾಗಿದೆ*! ಎಫೆಸ 3:9-11 ಹೀಗೆ ಹೇಳುತ್ತದೆ,

> ಸಮಸ್ತವನ್ನು ಸೃಷ್ಟಿಸಿದ ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು ಪ್ರಕಟವಾಗುವ ವಿಧ ಎಂಥದೆಂದು ತಿಳಿಸುವ ಹಾಗೆಯೂ ದೇವಜನರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತು. ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ತನ್ನ ನಾನಾ ವಿಧವಾದ ಜ್ಞಾನವು ಪರಲೋಕದಲ್ಲಿ ರಾಜತ್ವಗಳಿಗೂ ಅಧಿಕಾರಿಗಳಿಗೂ ಈಗ ಕ್ರೈಸ್ತ ಸಭೆಯ ಮೂಲಕ

ಗೊತ್ತಾಗಬೇಕೆಂಬದನ್ನು ಉದ್ದೇಶಿಸಿದ್ದನು.

"ಸಭೆಯೊಂದಿಗೆ ಹೊಂದಿಕೊಂಡು ಹೋಗುವಂತೆ, ಸಭೆಯಿಲ್ಲದೆಯೂ ನಾನು ಹೊಂದಿಕೊಂಡು ಹೋಗಬಲ್ಲೆನು" ಎಂದು ಒಬ್ಬನು ಹೇಳಿದರೆ, ಅವನು ತಾನು ದೇವರಿಗಿಂತಲೂ ಹೆಚ್ಚಾಗಿ ಚುರುಕುಳ್ಳವನಾಗಿದ್ದೇನೆಂದು ನಿಜವಾಗಿಯೂ ಹೇಳುತ್ತಿದ್ದಾನೆ!

ದೇವರು ಸ್ಥಳಿಕ ಸಭೆಯನ್ನು ಯಾಕೆ ತನ್ನ ಯೋಜನೆಯ ಭಾಗವನ್ನಾಗಿ ಮಾಡಿದನು? ಸಾಮಾನ್ಯವಾಗಿ, *ಪ್ರತಿಯೊಬ್ಬ ಕ್ರೈಸ್ತನ ಮತ್ತು ಕ್ರಿಸ್ತನ ಮಧ್ಯದಲ್ಲಿ ಸಂಬಂಧವನ್ನು ಘೋಷಿಸಲಿಕ್ಕೆ ಸಹಾಯ ಮಾಡಲು ಮತ್ತು ಆ ಸಂಬಂಧದಲ್ಲಿ ಹೆಚ್ಚು ಜನರನ್ನು ತರಲು ಸಹಾಯ ಮಾಡಲು ಹಾಗೆ ಮಾಡಿದನು.*

ನಿರ್ದಿಷ್ಟವಾಗಿರಲು, ಸ್ಥಳಿಕ ಸಭೆಯು ಈ ರೀತಿಯಲ್ಲಿ ದೇವರ ಯೋಜನೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ: (1) ಕ್ರೈಸ್ತನಾಗಿರುವುದು, ಕ್ರೈಸ್ತನಾಗಿ ಉಳಿದು ಕೊಳ್ಳುವುದು, ಮತ್ತು ತನ್ನಷ್ಟಕ್ಕೆ ತಾನೇ ಇರುವದಕ್ಕಿಂತ ಹೆಚ್ಚಾಗಿ ಪ್ರೀತಿಸುವ ಮತ್ತು ಜೋಪಾಸನೆ ಮಾಡುವ ಗುಂಪಿನಲ್ಲಿ ಆತ್ಮಿಕವಾಗಿ ಬೆಳೆಯುವುದು ಸುಲಭವಾಗಿರುತ್ತದೆ. (2) ಸ್ಥಳಿಕ ಸಭೆಯಲ್ಲಿ ಒಂದುಗೂಡಿದ ಕ್ರೈಸ್ತರು ಭಕ್ತಿವೃದ್ಧಿಯ, ಸುವಾರ್ತಾ ಸೇವೆಯ ಮತ್ತು ಪರೋಪಕಾರದ ಕಾರ್ಯಗಳನ್ನು ಸಾಧಿಸಬಲ್ಲರು. ವೈಯಕ್ತಿಕವಾಗಿ ಇದನ್ನು ಮಾಡಲು ಅವರಿಗೆ ಅಸಾಧ್ಯವಾಗಿರುವುದು. (3) ದೇವರು ಒಂದು ವಿಶೇಷವಾದ ರೀತಿಯಲ್ಲಿ ತನ್ನ ಮಕ್ಕಳ ಒಂದು ಗುಂಪಿನ ಹುದುವಾದ ಆರಾಧನೆಯಿಂದ ಮಹಿಮೆ ಹೊಂದುವನು.

**ಸ್ಥಳಿಕ ಸಭೆಗಳು ಒಂದಕ್ಕೊಂದು ಹೇಗೆ ಸಂಬಂಧಿಸುವವು?**

ಸ್ಥಳಿಕ ಸಭೆಗಳು ಒಂದಕ್ಕೊಂದು ಹೇಗೆ ಸಂಬಂಧಿಸುವವು? *ಮೊದಲನೆಯದು, ಕ್ರಿಸ್ತನ ಎಲ್ಲಾ ಸ್ಥಳಿಕ ಸಭೆಗಳ ಮಧ್ಯದಲ್ಲಿ ಐಕ್ಯತೆಯಿರುವುದು.* ಈ ಐಕ್ಯತೆಯು ತತ್ವದ ಐಕ್ಯತೆಯೊಂದಿಗೆ ಪ್ರಾರಂಭವಾಗುತ್ತದೆ. ಕರ್ತನ ಸಭೆಯಲ್ಲಿ ಪ್ರತಿಯೊಂದು ಸ್ಥಳಿಕ ಸಭೆಯು ಐಕ್ಯವಾಗಿರಲು ಹೋರಾಡುತ್ತದೆ: "ಸಹೋದರರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರ ಬೇಕು; ನಿಮ್ಮಲ್ಲಿ ಭೇದಗಳಿರಬಾರದು, ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವ ರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ" (1 ಕೊರಿಂಥ 1:10). ಈ ತತ್ವದ ಐಕ್ಯತೆಯು ಅಭಿಪ್ರಾಯದ ಐಕ್ಯಮತ್ಯದಂತೆ ಇರುವದಿಲ್ಲ; ಸಹೋದರತ್ವದಲ್ಲಿ ವಿವಿಧ ಅಭಿಪ್ರಾಯಗಳಿಗಾಗಿ ಸಾಕಷ್ಟು ಅವಕಾಶವಿರುತ್ತದೆ. ತತ್ವದ ಐಕ್ಯತೆಯು ಆಚರಣೆಯು ಸಂಪೂರ್ಣ ಏಕರೂಪವನ್ನೂ ಕೇಳುವದಿಲ್ಲ. ಪ್ರಯೋಜಕತೆಯ ವಿಷಯಗಳಲ್ಲಿ ಪ್ರತಿಯೊಂದು ಸ್ಥಳಿಕ ಸಭೆಯು ಕರ್ತನ ಚಿತ್ತವನ್ನು ಹೇಗೆ ಕೈಕೊಳ್ಳಬೇಕೆಂಬುದನ್ನು ತೀರ್ಮಾನಿಸಲು ಸ್ವತಂತ್ರವುಳ್ಳದ್ದಾಗಿದೆ. ಹೀಗಿದ್ದರೂ, ಈ ಐಕ್ಯತೆಯು ಒಂದೇ ವಿಶ್ವಾಸದ ಅಗತ್ಯತೆಗಳನ್ನು ಕುರಿತು ವಿವಿಧ ಸ್ಥಳಿಕ ಸಭೆಗಳ ಮಧ್ಯದಲ್ಲಿ ಒಪ್ಪಂದವನ್ನು ಅನ್ವಯಿಸುತ್ತದೆ.

ಐಕ್ಯತೆಯು ತತ್ವದ ವಿಷಯಗಳ ಮೇಲೆ ಒಪ್ಪಂದಕ್ಕೆ ಮಾತ್ರ ನೇಮಿತವಾಗಿರುವದಿಲ್ಲ; ಪ್ರೀತಿಯ ಐಕ್ಯತೆಯೂ ಇರುವುದು, ಎಲ್ಲಾ ಸ್ಥಳಿಕ ಸಭೆಗಳು "ಸಹೋದರತ್ವವನ್ನು" ಮಾಡುವವು ಮತ್ತು ಪ್ರತಿಯೊಬ್ಬ ಕ್ರೈಸ್ತನು ಈ ಸಹೋದರತ್ವವನ್ನು ಪ್ರೀತಿಸಬೇಕು ಎಂಬ ಗುರುತು ಇರುವುದು (1 ಪೇತ್ರ 2:17). ಈ ಪ್ರೀತಿಯ ಒಂದು ಪರಿಣಾಮವು ಸ್ಥಳಿಕ ಸಭೆಗಳು ಒಂದಕ್ಕೊಂದು ತಾವೇ ಸ್ಪರ್ಧೆಯಲ್ಲಿ ಇರುವೆವೆಂದು ಯೋಚಿಸುವುದಿಲ್ಲ. ಇನ್ನೊಂದು ಪರಿಣಾಮವು, ಪ್ರತಿಯೊಂದು ಮಾಡುವ ಒಳ್ಳೆಯ ಕೆಲಸಗಳಲ್ಲಿ ಒಂದನ್ನೊಂದು ಪ್ರೋತ್ಸಾಹಿಸುವವು.

*ಎರಡನೆಯದು, ಸ್ಥಳಿಕ ಸಭೆಗಳಲ್ಲಿ ಸ್ವಾತಂತ್ರ್ಯವು ಅಸ್ತಿತ್ವದಲ್ಲಿ ಇರುವುದು.*

ವಿಪರ್ಯಾಸವಾಗಿ, ಪ್ರತಿಯೊಂದು ಸ್ಥಳಿಕ ಸಭೆಯು ಪ್ರತಿಯೊಂದು ಇತರ ಸ್ಥಳಿಕ ಸಭೆಯಿಂದ ಸ್ವತಂತ್ರವಾಗಿರುವುದು. ಈ ವಿಚಾರವನ್ನು ವ್ಯಕ್ತಪಡಿಸಲು "ಸ್ಥಳಿಕ ಸಭೆಯ ಸ್ವಾಯತ್ತತೆ" ಎಂಬ ಮಾತನ್ನು ಉಪಯೋಗಿಸುವೆವು. ಇದರ ಅರ್ಥ ಪ್ರತಿಯೊಂದು ಸ್ಥಳಿಕ ಸಭೆಯು ಸ್ವಯಂ-ಆಳ್ವಿಕೆಯುಳ್ಳದ್ದಾಗಿದೆ ಎಂದಾಗುತ್ತದೆ. ಹೀಗಿದ್ದರೂ, "ಸ್ವಯಂ ಆಳ್ವಿಕೆಯ" ವಿಚಾರವು ಒಂದು ರೀತಿಯಲ್ಲಿ ತಪ್ಪಾಗಿ ನಡಿಸುವಂಥಾದ್ದಾಗಿರುತ್ತದೆ. ಸ್ಪಷ್ಟವಾಗಿ, ಪ್ರತಿಯೊಂದು ಸ್ಥಳಿಕ ಸಭೆಯು, ಇಡೀ ಸಹೋದರತ್ವದಂತೆ, ಪ್ರತಿಯೊಬ್ಬ ಕ್ರೈಸ್ತನಂತೆ, ರಾಜ್ಯದ ಅರಸನಿಗೆ, ಕ್ರಿಸ್ತನಿಗೆ ಅಧೀನವಾಗುವ ಜವಾಬ್ದಾರಿಕೆಯುಳ್ಳದ್ದಾಗಿದೆ. ಇದು ಕ್ರಿಸ್ತನಿಗೆ ಅಧೀನತೆಯಲ್ಲಿ "ಸ್ವತಂತ್ರವಾಗಿ ರುವುದು," "ಸ್ವಯಂ-ಆಳಿಕೆಯುಳ್ಳದ್ದು" ಇಲ್ಲವೇ "ಸ್ವಾಯತ್ತತೆ" ಆಗಿರುತ್ತದೆ.

ಸ್ಥಳಿಕ ಸಭೆಯ ಸ್ವಾಯತ್ತತೆಯು ಪ್ರತಿಯೊಂದು ಸ್ಥಳಿಕ ಸಭೆಯು ತನಗಾಗಿ ತೀರ್ಮಾನಗಳನ್ನು ಮಾಡುವದನ್ನು ಸರಿಯಾಗಿ ಕೇಳುತ್ತದೆ. ವಿಶಾಲವಾದ ಸ್ಥಳಿಕ ಸಭೆಗಳು ಚಿಕ್ಕ ಸ್ಥಳಿಕ ಸಭೆಗಳ ಮೇಲೆ ಆಡಳಿತೆ ನಡಿಸುವದಿಲ್ಲ. ಇಲ್ಲವೇ ಸ್ಥಳಿಕ ಸಭೆಯ ಮೇಲೆ ಯಾವುದೇ ಕೂಟವಾಗಲೀ, ಸಮ್ಮೇಳನವಾಗಲಿ ಇಲ್ಲವೇ ಸಂಘಟನೆಯಾಗಲಿ ತನ್ನ ಚಿತ್ತವನ್ನು ಒತ್ತಾಯ ಪೂರ್ವಕವಾಗಿ ಹೇರುವದಿಲ್ಲ.

ಸ್ಥಳಿಕ ಸಭೆಯ ಸ್ವಾಯತ್ತತೆಯಲ್ಲಿ ನಾವು ಏಕೆ ನಂಬಬೇಕು? ನಮಗೆ ಕನಿಷ್ಠ ಪಕ್ಷ ಮೂರು ಕಾರಣಗಳಿರುತ್ತವೆ:

(1) ಹೊಸ ಒಡಂಬಡಿಕೆಯು ಹಿರಿಯರ ಅಧಿಕಾರವನ್ನು ಅವರು ಕಾರ್ಯಮಾಡುವ ಸ್ಥಳಿಕ ಸಭೆಗೆ ಮಿತಿಗೊಳಿಸುತ್ತದೆ: "ನಿಮ್ಮಲ್ಲಿರುವ ದೇವರ ಮಂದೆಯನ್ನು ಕಾಯಿರಿ, ..." (1 ಪೇತ್ರ 5:2; KJV) ಎಂದು ಪೇತ್ರನು ಹಿರಿಯರಿಗೆ ಬರೆದನು. ತಮ್ಮೊಳಗಿರುವ ಮಂದೆಯನ್ನು ಹೊರತು ಪಡಿಸಿ ಬೇರೆ ಯಾವುದೇ ಮಂದೆಯ ಮೇಲೆ ಸಭಾಪಾಲಕರಂತೆ ಇಲ್ಲವೇ ಕುರುಬರಂತೆ ವರ್ತಿಸಲು ಅಧಿಕಾರ ಹೊಂದಿಕೊಂಡಿರಲಿಲ್ಲ.

(2) ಸ್ಥಾನಿಕ, ರಾಷ್ಟ್ರೀಯ, ಇಲ್ಲವೇ ಅಂತರ್ರಾಷ್ಟ್ರೀಯ ಸಂಘಟನೆಗಳಿಗಾಗಿ, ಇಲ್ಲವೇ ಸಭೆಗಳ ಸಂಘಟನೆಗಳಿಗಾಗಿ ಹೊಸ ಒಡಂಬಡಿಕೆಯಲ್ಲಿ ಯಾವುದೇ ಪೂರ್ವ ನಿದರ್ಶನವು ಇಡಲ್ಪಟ್ಟಿರುವದಿಲ್ಲ. ಈ ಸಂಘಟನೆಗಳು ಮೊದಲನೆಯ ಶತಮಾನದ ಸಭೆಯಲ್ಲಿ ಅಸ್ತಿತ್ವದಲ್ಲಿ ಇರಲೇ ಇಲ್ಲ.

(3) ಈ ಕಾರಣವು ಪರಿಶುದ್ಧ ಬರಹದಿಂದ ಹೊರಟು ಬಾರದೆ ಇದ್ದರೂ, ಅದು ಸ್ಥಳಿಕ ಸಭೆಗಳು ಒಂದರ ಮೇಲೊಂದು ಅವಲಂಭಿತವಾಗಿರಲಿಲ್ಲ ಎಂಬ ವ್ಯವಸ್ಥಾಪನೆಯಲ್ಲಿ ದೈವಿಕ ಜ್ಞಾನವು ಪ್ರತ್ಯಕ್ಷವಾಗಿದೆಯೆಂದು ಹೇಳಬಹುದು. ಒಂದು ಸ್ಥಳಿಕ ಸಭೆಯು ತಪ್ಪಾಗಿ ಹೋದರೆ, ಇತರವುಗಳು ಹಾಗೆ ಮಾಡುವಂತೆ ಅವಶ್ಯಕವಾಗಿ ಕಾರಣವಾಗುತ್ತಿರಲಿಲ್ಲ.

ಸ್ಥಳಿಕ ಸಭೆಯ ಸ್ವಾಯತ್ತತೆಯಲ್ಲಿ *ಯಾಕೆ* ಕೆಲವರು ನಂಬುವದಿಲ್ಲ?

ಕೆಲವರು ಅಪೊಸ್ತಲರ ಕೃತ್ಯಗಳು 15ರಲ್ಲಿಯ "ಯೆರೂಸಲೇಮ ಸಮ್ಮೇಳನವನ್ನು" ಅಂತರ್ ಸಭಾ ಸಂಘಟನೆಗಳಿಗಾಗಿ ಒಂದು ಪೂರ್ವನಿದರ್ಶನದಂತೆ ಹೇಳುತ್ತಾರೆ. ಹೀಗಿದ್ದರೂ, (1) "ಯೆರೂಸಲೇಮ ಸಮ್ಮೇಳನವು" ಒಂದು ಸಮಯದ ಘಟನೆಯಾಗಿದ್ದು, ಸತತವಾದ ಸಮ್ಮೇಳನದ ವ್ಯವಸ್ಥೆಯಾಗಿರಲಿಲ್ಲ; (2) ಒಂದು ಪ್ರಶ್ನೆಯಿದ್ದ ಮತ್ತು ಬುದ್ಧಿವಾದದ ಅಗತ್ಯತೆಯಿದ್ದ ಸಹೋದರರಿಂದ ಅದು ಬೇಡಿಕೊಳ್ಳಲ್ಪಟ್ಟಿತು; (3) ವಾರಸುದಾರರಿಲ್ಲದ ಅಪೊಸ್ತಲರನ್ನು ಅದು ತೋರಿಸಿತು; ಮತ್ತು (4) ಮೇಲಿನಿಂದ ಕೊಡಲ್ಪಡುವ "ಸಭೆಯ ಕಾನೂನಿನಂತೆ" ಉಪಯೋಗಿಸಲ್ಪಡಲಿಕ್ಕೆ ಉದ್ದೇಶಿಸುವಂತೆ ಕೇಳಿಸದ ಒಂದು ದಾಖಲೆಯನ್ನು ಅದು ಕಳುಹಿಸಿತು.

ಇತರರು ಸಭೆಗಳೊಂದಿಗಿನ ಅಪೊಸ್ತಲರ, ಕೆಲಸವನ್ನು ಅವರ ಸಹಾಯಕರ ಕೆಲಸವನ್ನೊಳಗೊಂಡು ವ್ಯಕ್ತಿಗಳು ವಿಶಾಲವಾದ ಕ್ಷೇತ್ರದ ಮೇಲೆ ಅಪೊಸ್ತಲರಂತೆ ಸಂಘಟನೆಯ ಮೇಲೆಲ್ಲಾ ಉಪಯೋಗಿಸಿದರೆಂಬುದನ್ನು ನಿದರ್ಶನದಂತೆ ಉಪಯೋಗಿ

ಸುತ್ತಾರೆ. ಹೀಗಿದ್ದರೂ, ಅಪೊಸ್ತಲರು ವಿಶೇಷ ಅರ್ಹತೆಗಳನ್ನು ಮತ್ತು ವಿಶೇಷ ಅಧಿಕಾರವನ್ನು ಹೊಂದಿದ್ದರೂ ಅವರಿಗೆ ವಾರಸುದಾರರಿರಲಿಲ್ಲ. ಅವರ "ಅಧಿಕಾರವು" ಇಂದು ಯಾರಿಗೂ ಒಂದು ಮಾದರಿಯಾಗಲಾರದು.

"ಮಿಶನರಿ ಸೊಸೈಟಿಯನ್ನು" ಉಪಯೋಗಿಸುವದರಲ್ಲಿ ನಂಬುವವರು ಸಾಮಾನ್ಯವಾಗಿ, ಸ್ಥಳಿಕ ಸಭೆಯು ತನ್ನಷ್ಟಕ್ಕೆ ತಾನೇ ಮಾಡಲಾಗದ ಕೆಲಸಗಳಿರುವರಿಂದ, ಸಭೆಗಳ ಸಂಘಟನೆಯು ಅಗತ್ಯ ವಾಗಿದೆ ಎಂದು ಹೇಳುತ್ತಾರೆ. ಮಿಶನರಿ ಸೊಸೈಟಿ ಇಲ್ಲದೇ ಮಿಶನ್ ಕಾರ್ಯವು ಮಾಡಲ್ಪಡಲಾರದು, ಇದು ಅನೇಕ ಸಲ ಪ್ರದರ್ಶಿಸಲ್ಪಟ್ಟಿದೆ.

*ಮೂರನೆಯದು, ಸಹಕಾರವು ಸ್ಥಳಿಕ ಸಭೆಗಳಲ್ಲಿ ಸಂಭವಿಸತಕ್ಕದ್ದು.* ಸ್ಥಳಿಕ ಸಭೆಗಳು ತಮಗೆ ಸಾಮರ್ಥ್ಯವಿದ್ದಂತೆ ಮತ್ತು ಅವಕಾಶವಿದ್ದಂತೆ, ಒಳ್ಳೆಯ ಕೆಲಸಗಳಲ್ಲಿ ಸಹಾಯ ಮಾಡಬಹುದು. ಆ ಕೆಲಸಗಳು ಪರೋಪಕಾರವನ್ನು, ಸುವಾರ್ತಾ ಸೇವೆಯನ್ನು ಇಲ್ಲವೇ ಭಕ್ತಿವೃದ್ಧಿಯನ್ನು ಒಳಗೊಂಡಿರಬಹುದು. ಸಭೆಯ ಸಹಕಾರವು ವಿವಿಧ ಸ್ಥಳಿಕ ಸಭೆಗಳಿಂದ ಪ್ರವೇಶಿಸಿದ್ದು ವಾಕ್ಯಕ್ಕಾನುಗುಣವಾಗಿದೆ. ಹೀಗಿದ್ದರೂ, ಯಾವುದೇ ಸ್ಥಳಿಕ ಸಭೆಯು ಇನ್ನೊಂದಕ್ಕೆ ಸಹಾಯ ಮಾಡಲು ಒತ್ತಾಯಿಸಲ್ಪಡಲಾರದು.

## ಸ್ಥಳಿಕ ಸಂಘಟನೆ

ಪ್ರತಿಯೊಂದು ಸ್ಥಳಿಕ ಸಭೆಯ ಸ್ವಯಂ ಆಡಳಿತೆಯುಳ್ಳದ್ದಾಗಿದ್ದರೆ, ಸ್ಥಳಿಕ ಸಭೆಯು ಹೇಗೆ ಸಂಘಟಿಸಲ್ಪಡಬಹುದು? ಈ ವಿಷಯದ ಮೇಲೆ ಹೊಸ ಒಡಂಬಡಿಕೆಯು ಯಾವ ಮಾರ್ಗದರ್ಶನವನ್ನು ಒದಗಿಸುತ್ತದೆ? ಆ ಸಮಯದಲ್ಲಿ ಸ್ಥಳಿಕ ಸಭೆಗಳಲ್ಲಿ ಹಲವಾರು "ಹುದ್ದೆಗಳ," "ಕಾರ್ಯಗಳ" ಇಲ್ಲವೇ "ನಾಯಕ ಪಾತ್ರಗಳ" ಬಗ್ಗೆ ಮಾತಾಡುವದರಿಂದ ಸ್ಥಳಿಕ ಸಭೆಗಳು ಹೇಗೆ ಸಂಘಟಿಸಲ್ಪಟ್ಟವು ಎಂಬುದನ್ನು ಹೊಸ ಒಡಂಬಡಿಕೆ ಪ್ರಕಟಿಸುತ್ತದೆ. ಇವು ಅವರ ಸಂಘಟನೆಯನ್ನು ನಿರ್ಧರಿಸಿದವು.

*ಸಭಾಹಿರಿಯರು ಸಭೆಯನ್ನು ನಡಿಸಬೇಕು.* ಹೊಸ ಒಡಂಬಡಿಕೆಯ ಸಮಯಗಳಲ್ಲಿ ಸ್ಥಳಿಕ ಸಭೆಯನ್ನು ನಡಿಸುವದಕ್ಕಾಗಿ ಹಿರಿಯರು ನೇಮಿಸಲ್ಪಟ್ಟರು. "ಇದಲ್ಲದೆ ಪ್ರತಿ ಸಭೆಯಲ್ಲಿ ಸಭೆಯವರ ಸಮ್ಮತಿಯಿಂದ ಹಿರಿಯರನ್ನು ಗೊತ್ತು ಮಾಡಿ ನೇಮಿಸಿ ಉಪವಾಸವಿದ್ದು ಪ್ರಾರ್ಥನೆಮಾಡಿ ಅವರು ನಂಬಿದ್ದ ಕರ್ತನ ಕೈಗೆ ಅವರನ್ನು ಒಪ್ಪಿಸಿದರು" ಎಂದು ಅಪೊಸ್ತಲರ ಕೃತ್ಯಗಳು 14:23 ಹೇಳುತ್ತದೆ (ತೀತ 1:5 ಸಹ ನೋಡಿರಿ). ಈ ಹಿರಿಯರು ಅನೇಕ ಹೆಸರುಗಳಿಂದ ಕರೆಯಲ್ಪಟ್ಟಿದ್ದಾರೆ. ಇವು ಅವರು ಸಭೆಯಲ್ಲಿ ವಹಿಸುತ್ತಿದ್ದ ಪಾತ್ರಗಳ ಬಗ್ಗೆ ಕೆಲವೊಂದನ್ನು ಪ್ರಕಟಿಸುತ್ತವೆ. ಅವರು *ಹಿರಿಯರಾಗಿದ್ದರು* (ಅಪೊಸ್ತಲರ ಕೃತ್ಯಗಳು 14:23; ಅಪೊಸ್ತಲರ ಕೃತ್ಯಗಳು 20:17; ತೀತ 1:5; 1 ಪೇತ್ರ 5:1; *presbuteros* ಎಂಬ ಗ್ರೀಕ್ ಪದದಿಂದ), ಇದು ಅವರು ವಯಸ್ಸಾದವರು, ಹೆಚ್ಚು ಅನುಭವಿಸಿದ್ದವರು, ಬುದ್ಧಿವಂತ ಜನರು ಎಂಬುದನ್ನು ಸೂಚಿಸುತ್ತದೆ, ಅವರು *bishops* ಇಲ್ಲವೇ ಅಧ್ಯಕ್ಷರು ಆಗಿದ್ದರು (ಅಪೊಸ್ತಲರ ಕೃತ್ಯಗಳು 20:28; ಫಿಲಿಪ್ಪಿ 1:1; ತೀತ 1:7; *episkopos* ಎಂಬ ಗ್ರೀಕ್ ಪದದಿಂದ) ಇದು ಅವರು ಮೇಲ್ವಿಚಾರರೂ ಇಲ್ಲವೇ ಅಧ್ಯಕ್ಷರೂ ಆಗಿದ್ದರೆಂಬುದನ್ನು ಸೂಚಿಸುತ್ತದೆ. ಅವರು ಪಾಸ್ಟರರು ಇಲ್ಲವೇ ಕುರುಬರು ಆಗಿದ್ದರು (ಅಪೊಸ್ತಲರ ಕೃತ್ಯಗಳು 20:28; ಎಫೆಸ 4:11; 1 ಪೇತ್ರ 5:12; *poimen* ಎಂಬ ಗ್ರೀಕ್ ಪದದಿಂದ), ಇದು ಅವರು ಮಂದೆಯ ಕಡೆಗೆ, ಸಭೆಗೆ ಕುರುಬರಂತೆ ವರ್ತಿಸಬೇಕೆಂಬುದನ್ನು ಸೂಚಿಸುತ್ತದೆ.

ಈ ಎಲ್ಲಾ ಮೂರು ಮಾತುಗಳು ಒಂದೇ "ಹುದ್ದೆಗೆ" ಅನ್ವಯಿಸುತ್ತದೆಂಬುದು ಸ್ಪಷ್ಟವಾ ಗುತ್ತದೆ. ಉದಾಹರಣೆಯಾಗಿ ಅಪೊಸ್ತಲರ ಕೃತ್ಯಗಳು 20:17, 18ರಲ್ಲಿ, ಪೌಲನು ಎಫೆಸದಲ್ಲಿಯ "ಹಿರಿಯರಿಗೆ" ಮಾತಾಡುತ್ತಿದ್ದನು. "ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪರಿಶುದ್ಧಾತ್ಮನು ನಿಮ್ಮನ್ನೆ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ

ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ. ...'' ಎಂದು ಹೇಳಿದನು (ಅಪೊಸ್ತಲರ ಕೃತ್ಯ ಗಳು 20:28). ''ಹಿರಿಯರು,'' ''ಅಧ್ಯಕ್ಷರಾಗಿ'' ಮಾಡಲ್ಪಟ್ಟಿದ್ದರು ಮತ್ತು ''ಅಧ್ಯಕ್ಷರು'' ಎಂಬುದು ಬೇರೆ ಕಡೆಯಲ್ಲಿ ಏಕ ವಚನದಲ್ಲಿ, ''ಬಿಷಪ್'' (ಎಪಿಸ್ಕೊಸ್) ಎಂದು ಭಾಷಾಂತರಿಸಲ್ಪಟ್ಟಿದೆ, ಹೀಗೆ ''ಹಿರಿಯರು'' ''ಬಿಷಪ್''ರಾಗಿದ್ದರು. ಈ ''ಹಿರಿಯರು'' ಇಲ್ಲವೇ ''ಬಿಷಪ್‍ರು'' ಮಂದೆಯನ್ನು ''ಕಾಯಬೇಕು'' (''ಪರಿಪಾಲಿಸ ಬೇಕು'') ಎಂದು ಹೇಳಲ್ಪಟ್ಟರು. ಉಪಯೋಗಿಸಿದ ಗ್ರೀಕ್ ಪದವು ''ಪಾಸ್ಟರ್'' ಇಲ್ಲವೇ ''ಶೆಫರ್ಡ್'' *(poimen)*ದ ಕ್ರಿಯಾಪದ ರೂಪವಾಗಿದೆ. ಹಿರಿಯರು ಕುರುಬರಂತೆ ವರ್ತಿಸಬೇಕು; ಅವರು ''ಪಾಸ್ಟರರು'' ಆಗಿರಬೇಕು. ಹೀಗೆ ''ಹಿರಿಯರು,'' ''ಬಿಷಪ್‍ರು'' ಮತ್ತು ''ಪಾಸ್ಟರರು'' ಒಂದೇ ರೀತಿಯ ಗುಂಪಿಗೆ ಸೇರಿದವರಾಗಿದ್ದಾರೆ (ನೋಡಿರಿ ತೀತ 1:5, 7 ಮತ್ತು 1 ಪೇತ್ರ 5:1, 2 KJVಯಲ್ಲಿ ಮತ್ತು NRSV) ಈ ಜನರಿಗೆ ಕ್ರಿಸ್ತನ ಮಂದೆಯನ್ನು ನಡಿಸುವದಕ್ಕಾಗಿ ವಿಶೇಷ ಅರ್ಹತೆಗಳಿರಬೇಕಾಗಿತು (1 ತಿಮೊಥೆ 3; ತೀತ 1).

*ಡೀಕನರು ಸಭೆಯ ಸೇವೆ ಮಾಡಬೇಕು.* ''ಡೀಕನ್'' ಎಂಬ ಪದವು *diakonos* ರಿಂದ ಬಂದಿದ್ದು, ಸೇವಕನು ಇಲ್ಲವೇ ಸೇವೆ ಮಾಡುವವನು ಎಂದು ಅಕ್ಷರಶಃ ಅರ್ಥವಾಗುತ್ತದೆ. ಇದು ಸೇವೆ ಮಾಡಲು ವಿಶೇಷವಾಗಿ ನೇಮಿಸಲ್ಪಟ್ಟ ಜನರ ಒಂದು ವಿಶೇಷವಾದ ಗುಂಪಿಗೆ ಯಾವಾಗಲೂ ಅನ್ವಯವಾಗುವದಿಲ್ಲ, ಒಂದು ಅರ್ಥದಲ್ಲಿ, ಎಲ್ಲಾ ಕ್ರೈಸ್ತರು ಸೇವಕರಾಗಿರುವರು. ಹೀಗಿದ್ದರೂ ಕೆಲವೊಂದು ವಿಶೇಷವಾದ ಅರ್ಥದಲ್ಲಿ ಡೀಕನರು ಇದ್ದರು ಎಂಬುದು ಫಿಲಿಪ್ಪಿ 1:1 ಮತ್ತು 1 ತಿಮೊಥೆ 3ರಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಕೂಡಿಸಿ, ಅಪೊಸ್ತಲರ ಕೃತ್ಯಗಳು 6ರಲ್ಲಿ ಆಯ್ಕೆ ಮಾಡಲ್ಪಟ್ಟವರು ಡೀಕನರಾಗಿದ್ದರೆಂದು ಕೆಲವರು ಯೋಚಿಸುತ್ತಾರೆ, ಯಾಕಂದರೆ ಅವರ ಪಾತ್ರವು ''ಸೇವೆ ಮಾಡುವುದು'' ಆಗಿತ್ತು.

ಹಿರಿಯರೊಂದಿಗೆ ಸಂಬಂಧಿಸಿ ಡೀಕನರ ಕೆಲಸವು ''ಹುದ್ದೆಗೆ'' *ಅನ್ವಯಿಸಿದ ಪದದಿಂದ ಸೂಚಿಸಲ್ಪಟ್ಟಿತು. ಅವರ ಕೆಲಸವು ಸೇವೆ ಮಾಡುವದಾಗಿತ್ತು. ''ಡೀಕನ್''* ಎಂಬ ಶಿರೋ ನಾಮಕ್ಕೆ ಯಾವ ಅಧಿಕಾರವೂ ಅನ್ವಯಿಸಲ್ಪಟ್ಟಿದ್ದಿಲ್ಲ. ಡೀಕನರನ್ನು ಕುರಿತು ಈ ಕೆಳಗಿನ ಸೂಚನೆಗಳನ್ನು ಯೋಚಿಸಿರಿ:

(1) ಅವರು ಹಿರಿಯರಿಗೆ ಸಮಾನರಾಗಿರುವದಿಲ್ಲ. ಹಿರಿಯರಿಗೆ ಸಭಾ ಸೇವೆಯ ಒಂದು ಮುಖದ (''ಆತ್ಮಿಕತೆ'') ನಿಯಂತ್ರಣವಿರುವುದು ಮತ್ತು ಡೀಕನರಿಗೆ ಸೇವೆಯ ಇನ್ನೊಂದು ಮುಖದ (''ಪ್ರಾಪಂಚಿಕ'') ನಿಯಂತ್ರಣವಿರುವುದು.

(2) ಹಿರಿಯರ ಕಾರ್ಯಕ್ರಮದ ಕೆಲಸಕ್ಕೆ ಮನ್ನಣೆ ಕೊಡುವ ಇಲ್ಲವೇ ಮನ್ನಣೆಕೊಡದಿರುವ ಅಥವಾ ಹಿರಿಯರಿಗೆ, ಸೂಚನೆಗಳನ್ನು ಕೊಡುವ ಒಂದು ಸಲಹೆಗಾರರ ಪ್ರತ್ಯೇಕವಾದ ಮಂಡಳಿ ಅವರಾಗಿರುವದಿಲ್ಲ (ಅವರು ಅಂಥ ಸಲಹೆಗಳನ್ನು ಮಾಡಬಹುದು; ಯಾವುದೇ ಕ್ರೈಸ್ತನೂ ಹಾಗೆ ಮಾಡಬಹುದು).

(3) ಅನೇಕ ವಿಧಗಳಲ್ಲಿ ಅವರ ಅಹರ್ತೆಗಳು ಹಿರಿಯರ ಅರ್ಹತೆಗಳಂತಿದ್ದರೂ, ಜನರು ಡೀಕನರಾಗಿರುವದರಿಂದ ಹಿರಿಯರಾಗಲು ಯಾಂತ್ರಿಕವಾಗಿ ಚಲಿಸುವದಿಲ್ಲ.

(4) ಸೇವೆ ಮಾಡದ ಡೀಕನನು ಒಬ್ಬ ಡೀಕನನೆಂದು ಯೋಚಿಸಬಹುದೋ ಎಂಬುದು ಪ್ರಶ್ನಾರ್ಥಕವಾದದ್ದಾಗಿದೆ.

(5) ''ಡೀಕನ್'' ಎಂಬ ಹುದ್ದೆಯಲ್ಲಿ ಯಾವುದೇ ಅಧಿಕಾರವು ಅನ್ವಯಿಸಲ್ಪಡದೇ ಇರುವಾಗ, ಒಬ್ಬ ಡೀಕನನ್ನಿಗೆ ಇಲ್ಲವೇ ಸೇವಕನಿಗೆ ಒಂದು ಪ್ರತ್ಯೇಕವಾದ ರೀತಿಯಲ್ಲಿ ಇಲ್ಲವೇ ಒಂದು ಪ್ರತ್ಯೇಕವಾದ ಕೆಲಸವನ್ನು ಮಾಡಲು ಸಭೆಯ ಸೇವೆಯೆಂದು ಜವಾಬ್ದಾರಿಕೆ ಕೊಡಲ್ಪಡಬಹುದು. ಹಾಗೆ ಮಾಡಲ್ಪಡುವಾಗ, ಅವನಿಗೆ ಆ ಕೆಲಸದ ಮೇಲೆ ಅಧಿಕಾರವಿರುವುದು. ಆ ಕೆಲಸವನ್ನು ಪೂರೈಸಲು ಅವನು ನಾಯಕನಾಗ ಬಹುದಾಗುತ್ತದೆ ಅಂದರೆ, ಒಂದು ಕಾರ್ಯವನ್ನು ಪೂರೈಸುವದಕ್ಕಾಗಿ ಇತರರ ಕೃತ್ಯಗಳಿಗೆ ಅವನು

ಮಾರ್ಗದರ್ಶನ ಮಾಡುತ್ತಾನೆ. ಯಾವುದೇ ಅಂಥ ಅಧಿಕಾರವು ವಹಿಸಿಕೊಡಲ್ಪಟ್ಟ ಅಧಿಕಾರ ವಾಗಿರುತ್ತದೆ. ಅದು ಆ ಕಾರ್ಯ ಮುಗಿಯುವವರೆಗೆ ಮಾತ್ರವೇ ಇರುತ್ತದೆ.

(6) ರೋಮಾಪುರ 16:1ರಲ್ಲಿ ಫೊಯಿಬೆಯು ಸೇವಕಳೆಂದು ಉಲ್ಲೇಖಿಸಲ್ಪಟ್ಟಿದ್ದಾಳೆ. ಈ ವಚನದಲ್ಲಿ "ಸೇವಕಳು" ಎಂಬ ಪದವು ಮೊದಲನೆಯ ಶತಮಾನದ ಸಭೆಯಲ್ಲಿ ಮಹಿಳಾ ಡೀಕನರು (deaconesses) ಇದ್ದರೆಂಬುದನ್ನು ಸೂಚಿಸುತ್ತದೆಂದು ಕೆಲವರು ನಂಬುತ್ತಾರೆ. "ನಾನು ನಿಮ್ಮ ಬಳಿಗೆ ಕಳುಹಿಸುವ ನಮ್ಮ ಸಹೋದರಿಯಾದ ಫೊಯಿಬೆಯನ್ನು ಪ್ರೀತಿಯಿಂದ ಅಂಗೀಕರಿಸಿರಿ. ಆಕೆಯು ಕೆಂಕ್ರೆಯ ಪಟ್ಟಣದಲ್ಲಿರುವ ಸಭೆಯ ಸೇವಕಳಾಗಿದ್ದಾಳೆ" ಎಂದು ಅಲ್ಲಿ ಹೇಳಲ್ಪಟ್ಟಿದೆ. ರೋಮಾಪುರ 16:1ರಲ್ಲಿ "ಸೇವಕಳು" ಎಂಬುದಕ್ಕಾಗಿರುವ ಗ್ರೀಕ್ ಪದವು ಫಿಲಿಪ್ಪಿ 1:1ರಲ್ಲಿ ಉಪಯೋಗಿಸಿದಂತೆ ತಾಂತ್ರಿಕ ಅರ್ಥದಲ್ಲಿ ಇಲ್ಲಿ ಉಪಯೋಗಿಸಲ್ಪಟ್ಟಿರುವದಿಲ್ಲ, ಆದರೆ ಸಭೆಯ ಯಾವುದೇ ಸದಸ್ಯನು ಒಬ್ಬ ಸೇವಕನಾಗಿರುವ, ಒಬ್ಬ *ಡಿಯಾಕೊನೊಸ್*, ಒಬ್ಬ "ಡೀಕನ್" ಆಗಿರುವ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ ಎಂದು ಇತರರು ನಂಬುತ್ತಾರೆ.

*ಪ್ರಸಂಗಿಗಳು ಮತ್ತು ಬೋಧಕರು ಸ್ಥಳಿಕ ಸಭೆಗಳೊಂದಿಗೆ ಕೆಲಸ ಮಾಡಬೇಕು.* ಪ್ರಸಂಗಿಸುವುದು ಮತ್ತು ಬೋಧಿಸುವುದು ಸಭೆಯನ್ನು ಕಟ್ಟುವದಕ್ಕಾಗಿ ಹೊಸ ಒಡಂಬಡಿಕೆಯ ಸಮಯಗಳಲ್ಲಿ ಕೊಡಲ್ಪಟ್ಟ ಆತ್ಮಿಕ ವರಗಳೆಂಬದನ್ನು ಎಫೆಸ 4:11-13ರಲ್ಲಿ ಸೂಚಿಸುತ್ತದೆ.

ಪ್ರಸಂಗಿಗಾಗಿ ಹೊಸ ಒಡಂಬಡಿಕೆಯಲ್ಲಿ ಹಲವಾರು ನಾಮಕರಣಗಳು ಉಪಯೊಗಿಸಲ್ಪಟ್ಟಿವೆ. ಅವುಗಳು ಹೀಗಿವೆ. ಅವನು ಪ್ರಸಂಗಿ ಇಲ್ಲವೇ ಘೋಷಿಸುವವನು, *kerux ಸಂದೇಶವಾಹಕನು* ಆಗಿದ್ದನು (1 ತಿಮೊಥೆ 2:7; 2 ತಿಮೊಥೆ 1:11). *ಒಬ್ಬ ಸುವಾರ್ತಿಕನು, euangelistes* ಶುಭವಾರ್ತೆಯ ಸಂದೇಶವಾಹಕನು ಆಗಿದ್ದನು (ಅಪೊಸ್ತಲರ ಕೃತ್ಯಗಳು 21:8; ಎಫೆಸ 4:11; 2 ತಿಮೊಥೆ 4:5). ಈ ಹೆಸರುಗಳು ರಕ್ಷಿಸಲ್ಪಡದವರಿಗೆ ಶುಭ ವಾರ್ತೆಯನ್ನು ಘೋಷಿಸುವದನ್ನು ಒಳಗೊಂಡಿರುತ್ತವೆ. ಪ್ರಸಂಗಿಗಳಿಗೆ ಸಭೆಗೆ ಪ್ರಂಗಿಸುವ ಮತ್ತು ಸಭೆಯೊಂದಿಗೆ ಕಾರ್ಯಮಾಡುವ ಜವಾಬ್ದಾರಿಕೆಯಿತ್ತು. ಹೊಸ ಒಡಂಬಡಿಕೆಯ ಪುರಾವೆಯು ಈ ಸಂಗತಿಗಳನ್ನು ದೃಢಪಡಿಸುತ್ತದೆ: (1) ಹೊಸ ಒಡಂಬಡಿಕೆಯ ಸಮಯಗಳಲ್ಲಿ ಪ್ರಸಂಗಿಸುವಿಕೆಯೊಂದಿಗೆ ವಿಶೇಷ ಕಾರ್ಯವು ಇಲ್ಲವೇ ಆತ್ಮಿಕ ವರವು ಸಂಬಂಧಿಸಿತ್ತು (ಎಫೆಸ 4:11-13). ಇದು ಒಂದು ಅಲೌಕಿಕವಾದ ವರವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಈ ವರವು ಇಂದು ಅಲೌಕಿಕವಾದ ಪ್ರೇರೇಪಣೆಯಿಂದ ಬರುವದಿಲ್ಲ, ಆದರೆ ಬೆವರು ಸುರಿಸುವದರಿಂದ ಬರುತ್ತದೆ. ಸಭೆಯಲ್ಲಿಯ ಪ್ರತಿಯೊಬ್ಬನಿಗೂ ಈ ವರವು ಇರುವದಿಲ್ಲ. (2) ಪ್ರಸಂಗಿಗಳು ಪ್ರಸಂಗಿಸುತ್ತ ಒಂದು ಸ್ಥಳದಲ್ಲಿ ಹಲವಾರು ವರ್ಷಗಳವರೆಗೆ ಇರಬಹುದು; ಅವರೆಲ್ಲರೂ ಇಲ್ಲವೇ ಯಾವಾಗಲೂ ಸಂಚಾರಿಗಳಾಗಿರಲಿಲ್ಲ. (3) ಪ್ರಸಂಗಿಗಳು ಪ್ರಸಂಗಿಸುವದಕ್ಕಾಗಿ ಸಂಬಳ ಕೊಡಲ್ಪಡಬೇಕು. ಆದುದರಿಂದ, ಅವರು ಸಭೆಗಾಗಿ ಪೂರ್ಣಾವಧಿ ಕೆಲಸ ಮಾಡುವವ ರಾಗುವರು. (4) ಪ್ರಸಂಗಿಗಳು ಸಭೆಗೆ ಬೋಧಿಸತಕ್ಕದ್ದು ಹಾಗೆಯೇ ಹೊರಗಿನವರಿಗೂ ಪ್ರಸಂಗಿಸತಕ್ಕದ್ದು. (5) ಎಲ್ಲಾ ಹಿರಿಯರು ಪ್ರಸಂಗಿಸುವದರಲ್ಲಿ ಮತ್ತು ಬೋಧಿಸುವದರಲ್ಲಿ ಶ್ರಮೆ ಪಡಲಿಲ್ಲ (1 ತಿಮೊಥೆ 5:17). (6) ಪ್ರಸಂಗಿ ಒಂದು ಸ್ಥಳಿಕ ಸಭೆಯಲ್ಲಿ ಒಂದು ಕೆಲಸವು ಮಾಡಲು ಕೊಡಲ್ಪಟ್ಟಿದೆ. ಆ ಕೆಲಸವು ಯಾವುದು? ಉತ್ತರಕ್ಕಾಗಿ, ತಿಮೊಥೆಯನಿಗೆ ಮತ್ತು ತೀತನಿಗೆ ಬರೆದ ಪತ್ರಿಕೆಗಳನ್ನು ನೋಡಿರಿ.

ಸ್ಥಳಿಕ ಸಭೆಯ ಕೆಲಸದಲ್ಲಿ ಪ್ರಸಂಗಿಗೆ ಒಂದು ಸ್ಥಳವಿರುತ್ತದೆ. *ಆದಾಗ್ಯೂ, ಹೊಸ ಒಡಂಬಡಿಕೆಯ ಸಮಯಗಳಲ್ಲಿ ಪ್ರಸಂಗಿಗೆ ಸಭೆಯ ಮೇಲೆ ಅಧಿಕಾರವಿರಲಿಲ್ಲ.* ಹೊಸ ಒಡಂಬಡಿಕೆಯು ಸೌವಾರ್ತಿಕ ಅಧಿಕಾರದ ತತ್ವವನ್ನು ಬೋಧಿಸುವದಿಲ್ಲ. ಪ್ರಸಂಗಿಗೆ ಅಧಿಕಾರವೇನೋ ಇತ್ತು - *ಆದರೆ ಅವನ ಕೇವಲ ಅಧಿಕಾರವು ದೇವರ ವಾಕ್ಯವನ್ನು ಅಧಿಕಾರಯುಕ್ತವಾಗಿ ಪ್ರಸಂಗಿಸುವುದಾಗಿತ್ತು!*

"ಬೋಧಕ"ನಿಗಾಗಿ ಗ್ರೀಕ್ ಪದವು *didaskalos* ಎಂದಿತ್ತು. ಆ ಪದವು ಬೋಧಿಸುವುದು

ಒಂದು ವಿಶೇಷ ವರದಂತೆ ಹೇಳಲ್ಪಟ್ಟಲೆಲ್ಲಾ ಉಪಯೋಗಿಸಲ್ಪಟ್ಟಿದೆ (ಎಫೆಸ 4:11-13; ರೋಮಾಪುರ 12:7; 1 ಕೊರಿಂಥ 12:29). ಇದೂ ಸಹ ಹೆಚ್ಚಿನ ಮಟ್ಟಿಗೆ ಒಂದು ಅಲೌಕಿಕವಾದ ವರವಾಗಿತ್ತು. ಹಿರಿಯರು ಬೋಧಿಸಲು ಶಕ್ತರಾಗಬೇಕಿತ್ತು ಮತ್ತು ಪ್ರಸಂಗಿಗಳು ಬೋಧಿಸಲು ಶಕ್ತರಾಗಬೇಕಾಗಿತ್ತು. ಬಹುಶಃ ಒಂದು ಅರ್ಥದಲ್ಲಿ, ಪ್ರತಿಯೊಬ್ಬ ಕ್ರೈಸ್ತನು ಬೋಧಿಸಲು ಶಕ್ತನಾಗಬೇಕಾಗಿತ್ತು. ಕೆಲವರು ವಿಶೇಷವಾಗಿ ಈ ಕ್ಷೇತ್ರದಲ್ಲಿ ವರವುಳ್ಳವರಾಗಿದ್ದರು. ಮತ್ತು ದೇವರ ವಾಕ್ಯವನ್ನು ಬೋಧಿಸುವದರಲ್ಲಿ ಅವರಿಗೆ ಒಂದು ವಿಶೇಷವಾದ ಜವಾಬ್ದಾರಿಕೆ ಇತ್ತು.

ಇನ್ನೂ ಎರಡು ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದ ಅಗತ್ಯತೆ ಇರುವುದು.

*ಸಂಘಟನೆಯು ಯಾಕೆ ಇರಬೇಕು?* ಯಾಕೆ, ನಾವು ಈ ಮೊದಲು ಹೇಳಿದ್ದು ಸತ್ಯವಾಗಿದ್ದರೆ - ಅಂದರೆ, ಪ್ರತಿಯೊಬ್ಬ ಕ್ರೈಸ್ತನು ಸಮಾನನೂ ಮತ್ತು ದೇವರಿಗೆ ಸಮನಾಗಿ ಸಂಬಂಧಿಸಲ್ಪಟ್ಟವನೂ ಆಗಿದ್ದರೆ - ಸ್ಥಳಿಕ ಮಟ್ಟದಲ್ಲಿ ಯಾವುದೇ ಸಂಘಟನೆಯ, ನಾಯಕತ್ವದ ಯಾವುದೇ ಪದ್ಧತಿಯ ಅಗತ್ಯತೆಯು ಯಾಕೆ ಇರುತ್ತದೆ? ಉತ್ತರವು ಇದಾಗಿದೆ: *ನಾಯಕತ್ವವು ಇರುವುದು! ಯಾವುದೇ ಗುಂಪಿನಲ್ಲಿ, ಸಂಘಟನೆಯ/ನಾಯಕತ್ವದ ಒಂದು ರೀತಿಯ ಪದ್ಧತಿಯು ಉದ್ಭವಿಸುವುದು.* ದೇವರು ನಮಗೆ ತನ್ನ ಉದ್ದೇಶಕ್ಕಾಗಿ ಹಾಗೂ ನಮ್ಮ ಒಳ್ಳೆಯದಕ್ಕಾಗಿ - ಆ ಸಂಘಟನೆಗಾಗಿ ಹಾಗೂ ನಾಯಕತ್ವಕ್ಕಾಗಿ ಅತ್ಯುತ್ತಮವಾದ ನಕ್ಷೆಯನ್ನು ಕೊಡುವನು.

ಸಂಘಟನೆಯು ಈ ಪದ್ಧತಿಯಿಲ್ಲದೆ - ಪ್ರತ್ಯೇಕವಾಗಿ, ಹಿರಿಯರು ಮತ್ತು ಡೀಕನರು ಇಲ್ಲದೆ - ಸಭೆಯು ಅಸ್ತಿತ್ವದಲ್ಲಿ ಇರಬಹುದೋ? ಹೌದು. ಹೊಸ ಒಡಂಬಡಿಕೆಯ ಸಮಯಗಳಲ್ಲಿ ಕೆಲವು ಸಮಯ ಹಿರಿಯರಿಲ್ಲದೇ ಸಭೆಗಳು ಅಸ್ತಿತ್ವದಲ್ಲಿ ಇದ್ದ ಕಾರಣದಿಂದ ಇದು ಸಾಧ್ಯ ಎಂಬುದನ್ನು ನಾವು ತಿಳಿದಿರುತ್ತೇವೆ. ಸಭೆಯು ಸಾಧ್ಯವಾದಷ್ಟು ಬೇಗನೇ ಸಂಪೂರ್ಣವಾಗಿಯೂ ದೇವರ ವಾಕ್ಯಕ್ಕೆ ಅನುಗುಣವಾಗಿಯೂ ಸಂಘಟಿಸಲ್ಪಡಬೇಕು. ಅದನ್ನು ಮಾಡುವವರೆಗೆ ತೀತ 1:5ರ ಪ್ರಕಾರವಾಗಿ ಸಭೆಯ ಬಗ್ಗೆ ಕೆಲವೊಂದು "ಕೊರತೆಯು" (RSV) ಇಲ್ಲವೇ "ಅಗತ್ಯತೆಯು" (KJV) ಇರುತ್ತದೆ. "ನೀನು ಕ್ಷೇತ್ರ ದ್ವೀಪದಲ್ಲಿ ಇನ್ನೂ ಕ್ರಮಕ್ಕೆ ಬಾರದಿರುವ ಕಾರ್ಯಗಳನ್ನು ಕ್ರಮ ಪಡಿಸಿ ಪಟ್ಟಣ ಪಟ್ಟಣಗಳಲ್ಲೂ ಸಭೆಯ ಹಿರಿಯರನ್ನು ನೇಮಿಸಬೇಕೆಂದು ನಾನು ನಿನಗೆ ಅಪ್ಪಣೆ ಕೊಟ್ಟು ನಿನ್ನನ್ನು ಅಲ್ಲೇ ಬಿಟ್ಟು ಬಂದೆನಲ್ಲಾ" ಎಂದು ಪೌಲನು ಹೇಳಿದನು.

*ಸಭೆಯ ಹಿರಿಯರು ತಮ್ಮನ್ನು ತಾವು ಹೇಗೆ ನೋಡಿಕೊಳ್ಳಬೇಕು?* ಎಫೆಸ 4:11-13 ಆ ಪ್ರಶ್ನೆಗೆ ಉತ್ತರ ಕೊಡುತ್ತದೆ. ಅವರು ತಮ್ಮನ್ನು ದೇವರಿಂದ ವಿಶೇಷವರಗಳು - ಇತರ ಸದಸ್ಯರಿಂದ ಹೆಚ್ಚು ಉತ್ತಮವಾದ ಅಲ್ಲ, ಆದರೆ ಭಿನ್ನವಾದ ವರಗಳು ಕೊಡಲ್ಪಟ್ಟ ಸೇವಕರಂತೆ ಮತ್ತು ಸಭೆಗೆ ಸಹಾಯ ಮಾಡಲಿಕ್ಕೆ ಅವುಗಳನ್ನು ಉಪಯೋಗಿಸಬೇಕಾಗಿದ್ದವರಂತೆ ನೋಡಿಕೊಳ್ಳಬೇಕು.

## ಮುಕ್ತಾಯ

ಮುಕ್ತಾಯದಲ್ಲಿ, ಕರ್ತನ ಸಭೆಯ ಸಂಘಟನೆಗಾಗಿ ಹೊಸ ಒಡಂಬಡಿಕೆಯ ಯೋಜನೆಗಾಗಿ ಬೇಡಿಕೊಳ್ಳುತ್ತೇನೆ. ಕೆಲವು ಜನರಿಗೆ, ಸಭೆಯ ಸಂಘಟನೆಯು ಸಣ್ಣ ವಿಷಯವಾಗಿ ತೋರಬಹುದು. ಸಾಂಬಂಧಿಕವಾಗಿ ತತ್ವದ ಮತ್ತು ರೂಢಿಯ ಮಹತ್ವದ್ದಲ್ಲದ ವಿಷಯವಾಗಿರಬಹುದು. ಸಭೆಯ ಸಂಘಟನೆಯಲ್ಲಿ ಒಂದು ಬದಲಾವಣೆಯಿಂದ ದೊಡ್ಡ ಧರ್ಮ ಭ್ರಷ್ಟತೆಯು ಹಿಂಬಾಲಿಸಿರುತ್ತದೆ. ಹೊಸ ಒಡಂಬಡಿಕೆಯ ಸಂಘಟನೆಯ ವಿಧಾನವು ತಳ್ಳಿಬಿಡಲ್ಪಟ್ಟಾಗ ಸಭೆಯಲ್ಲಿ ಇತರ ಬದಲಾವಣೆಗಳ ಎಲ್ಲಾ ರೀತಿಗಳಲ್ಲಿ ಬಾಗಿಲವು ತೆರೆಯಲ್ಪಡುವದು ಕಂಡು ಬರುತ್ತದೆ.

ಸಭೆಯನ್ನು ಅದರ ಸಂಘಟನೆಯ ರಚನಾ - ಕ್ರಮಗಳೊಂದಿಗೆ ದೇವರು ಸ್ಥಾಪಿಸಿದಾಗ, ಆತನು ತಾನು ಏನನ್ನು ಮಾಡುತ್ತಿರುವನೆಂಬುದನ್ನು ಬಲ್ಲವನಾಗಿದ್ದನು? ನಾಯಕರು ಆತನನ್ನು ಸಂತುಷ್ಟಗೊಳಿಸುವರು ಮತ್ತು ಆತನ ಮಾರ್ಗದರ್ಶನಗಳಲ್ಲಿ ಕಾರ್ಯಮಾಡುತ್ತ ಆತ್ಮಿಕವಾಗಿ ಲಾಭ ಪಡೆಯುವರು.